# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1137 (1178) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-03-2026 |
| ಉತ್ತರಿಸಬೇಕಾದ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಹಾಗೂ ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇರುವುದರಿಂದ ರೈತರಿಗೆ ಸಮಯಕ್ಕೆ ಸರಿಯಾಗಿ ಕೃಷಿ ಸಲಹೆ ಹಾಗೂ ತಾಂತ್ರಿಕ ಸೇವೆಗಳು ಲಭ್ಯವಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು. ವೃಂದವಾರು ಖಾಲಿ ಹುದ್ದೆಗಳ ವಿವರ ನೀಡುವುದು) | ಕೃಷಿ ಇಲಾಖೆಯಲ್ಲಿ 753 ಕೃಷಿ ಅಧಿಕಾರಿ ಹಾಗೂ 2034 ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳು ಖಾಲಿ ಇದ್ದರೂ ಸಹ ಹೊರಗುತ್ತಿಗೆ/ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಯಡಿಯಲ್ಲಿ ಸಹಾಯಕ ತಾಂತ್ರಿಕರ ಸೇವೆಯನ್ನು ಹಾಗೂ ಆತ್ಮ (ATMA) ಯೋಜನೆಯಡಿಯಲ್ಲಿ ಉಪ ಯೋಜನಾ ನಿರ್ದೇಶಕರು, ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಸೇವೆಯನ್ನು ಪಡೆಯಲಾಗಿರುತ್ತದೆ. ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ದಾಸ್ತಾನು ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಹಾಗೂ ಖಾಲಿ ಇರುವ ಹುದ್ದೆಗಳಿಗನುಗುಣವಾಗಿ ಬೆರಳಚ್ಚುಗಾರರು, ವಾಹನ ಚಾಲಕರು, ಗ್ರೂಪ್ ಡಿ ಇವರುಗಳ ಸೇವೆಯನ್ನು ಸಹ ಬಳಸಿಕೊಂಡು ಸಕಾಲದಲ್ಲಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. (ಖಾಲಿ ಹುದ್ದೆಗಳ ಜಿಲ್ಲಾವಾರು, ವೃಂದವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ). |
| ಆ | ಖಾಲಿ ಇರುವ ಕೃಷಿ ಇಲಾಖೆಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ನೇಮಕಾತಿ ಪ್ರಕ್ರಿಯೆ, ಪ್ರಾರಂಭಿಸಿರುವುದೇ; ಇದ್ದಲ್ಲಿ, ನೇಮಕಾತಿ ಪೂರ್ಣಗೊಳಿಸುವ ಕಾಲಮಿತಿ ಎಷ್ಟು; (ವಿವರ ನೀಡುವುದು) | 945 ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳ ನೇಮಕ:ಕೃಷಿ ಅಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ **128** ಹುದ್ದೆಗಳು (ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ) ಹಾಗೂ ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ **817** ಹುದ್ದೆಗಳು (ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ) **ಒಟ್ಟು 945** ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸ್ತುತ, ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಗೆ ಬಂದಿದ್ದು, ಸರ್ಕಾರದ ನಿರ್ದೇಶನದನ್ವಯ ಹಿಂದಿನ ನೇಮಕಾತಿ ಅಧಿಸೂಚನೆ ರದ್ದು ಪಡಿಸಲಾಗಿರುವುದರಿಂದ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ. |

| | | |
|---|---|---|
| | | 2021 ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕೃಷಿ ಸಹಾಯಕರ ಹುದ್ದೆಯನ್ನು ನಶಿಸಿ ಹೋಗುವ ಹುದ್ದೆಗಳೆಂದು ಗುರುತಿಸಿರುವುದರಿಂದ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರು ಬಡ್ತಿ, ನಿವೃತ್ತಿ ಅಥವಾ ಮರಣ ಇನ್ನಿತರೆ ಕಾರಣಗಳಿಂದ ಖಾಲಿಯಾದಲ್ಲಿ ಈ ಹುದ್ದೆಗಳು ತನ್ನಿಂದ ತಾನೇ ರದ್ದಾಗುತ್ತದೆ. |
| ಇ | ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ರೈತರಿಗೆ ತಕ್ಷಣ ಕೃಷಿ ಮಾರ್ಗದರ್ಶನ ನೀಡುವ ಉದ್ದೇಶದಿಂದ ಮೊಬೈಲ್ ಕೃಷಿ ಸಲಹಾ ತಂಡಗಳು ಅಥವಾ ಡಿಜಿಟಲ್ ಅಗ್ರಿ ಸಲಹಾ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸಿರುವುದೇ: (ವಿವರ ನೀಡುವುದು) | ಹೌದು, ಡಿಜಿಟಲ್ ಕೃಷಿ ಸೇವೆಗಳ ಕೇಂದ್ರ ಯೋಜನೆಯು ಘೋಷಣೆಯಾಗಿ 8 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪಾಲುದಾರ ಸಂಸ್ಥೆಗಳಾದ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು ಮತ್ತು ಪ್ರಾದೇಶಿಕ ದೂರ ಸಂವೇದಿ ಕೇಂದ್ರ (ದಕ್ಷಿಣ) (RRSC, South),ಬೆಂಗಳೂರು ರವರೊಂದಿಗೆ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ಕ್ರಿಯಾ ಯೋಜನೆ ರೂಪಿಸುವ ಹಂತದಲ್ಲಿರುತ್ತದೆ. ಈ ಯೋಜನೆಯು 05 ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.<br><br>i) ಕೃಷಿ ನಿರತ ರೈತರಿಗೆ ಸಕಾಲದಲ್ಲಿ ಅಗತ್ಯವಿರುವ ತಾಂತ್ರಿಕ ಸಲಹೆಗಳನ್ನು ನೀಡಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 224 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಈಗಾಗಲೇ ಸ್ಥಾಪಿಸಲಾಗಿರುತ್ತದೆ.<br><br>ii) ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯದ ತಾಂತ್ರಿಕ ಸಿಬ್ಬಂದಿ ರೈತರ ಕ್ಷೇತ್ರಗಳಿಗೆ ಭೇಟಿ ನೀಡಿ ಮಣ್ಣು, ಬೆಳೆ ನಿರ್ವಹಣೆ ಹಾಗೂ ಪೀಡೆ ನಿರ್ವಹಣೆಯ ಕುರಿತು ಅಗತ್ಯವಿರುವ ತಾಂತ್ರಿಕ ಮಾಹಿತಿಯನ್ನು ಕ್ಷೇತ್ರ ಮಟ್ಟದಲ್ಲಿಯೇ ನೀಡಲಾಗುತ್ತಿದೆ.<br><br>iii) ತಾಂತ್ರಿಕ ಸಲಹೆಗಳ ಜೊತೆಗೆ ಇಲಾಖಾ ಕಾರ್ಯಕ್ರಮಗಳು ಹಾಗೂ ರೈತರಿಗೆ ದೊರೆಯುವ ಸೌಲಭ್ಯಗಳ ಕುರಿತು ಸಮಗ್ರ ಮಾಹಿತಿಯನ್ನು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಮೂಲಕ ಒದಗಿಸಲಾಗುತ್ತಿದೆ.<br><br>iv) ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ |

| | | |
|---|---|---|
| | | ಸಿಬ್ಬಂದಿಯು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಅಭಿವೃದ್ಧಿಪಡಿಸಿರುವ ಇ-ಸ್ಯಾಪ್ ತಂತ್ರಾಂಶವನ್ನು ಬಳಸಿ ಪೀಡೆಗಳನ್ನು ನಿಖರವಾಗಿ ಗುರುತಿಸಿ, ತೀವ್ರತೆಗೆ ಅನುಗುಣವಾಗಿ ಕೈಗೊಳ್ಳಬೇಕಾದ ನಿರ್ವಹಣಾ ಕ್ರಮಗಳ ಮಾಹಿತಿಯನ್ನು ರೈತರಿಗೆ ಸಂದೇಶ/ವಾಟ್ಸ್-ಆಪ್ ಮೂಲಕ ಸಕಾಲದಲ್ಲಿ ಒದಗಿಸಲಾಗುತ್ತಿದೆ. |
| ಈ | ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಬಲಪಡಿಸಿ ಕೃಷಿ ಅಧಿಕಾರಿಗಳ ನಿಯಮಿತ ಗ್ರಾಮ ಭೇಟಿ ಕಡ್ಡಾಯಗೊಳಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99, ದಿನಾಂಕ: 29-06-2000 ರಂತೆ ಪ್ರತಿ ಹೋಬಳಿಗೆ ಒಂದರಂತೆ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಸದರಿ ಆದೇಶದನ್ವಯ ರಾಜ್ಯದಲ್ಲಿ ಒಟ್ಟು 742 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.<br><br>• ಕೃಷಿ ಇಲಾಖೆಯ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಇಲಾಖೆಯಲ್ಲಿ ರೈತರಿಗೆ ಲಭ್ಯವಿರುವ ಸೌಲಭ್ಯಗಳು ಮತ್ತು ಸೇವೆಗಳ ಕುರಿತು ಕ್ಷೇತ್ರ ಮಟ್ಟದಲ್ಲಿ ಮಾಹಿತಿ ನೀಡುವ ಉದ್ದೇಶದಿಂದ ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ಅಧಿಕಾರಿಗಳು, ಆತ್ಮ ಸಿಬ್ಬಂದಿ ಹಾಗೂ ಕೃಷಿ ಸಂಜೀವಿನಿ ತಾಂತ್ರಿಕ ಸಿಬ್ಬಂದಿಗಳು ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.<br>• ಸದರಿಯವರು ರೈತರಿಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ನವೀನ ತಾಂತ್ರಿಕತೆಗಳ ಲಭ್ಯತೆ ಮತ್ತು ಅವುಗಳ ಅಳವಡಿಕೆ ಕುರಿತು ಮಾರ್ಗದರ್ಶನ ನೀಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ಜೊತೆಗೆ ರೈತರ ತರಬೇತಿ ಕಾರ್ಯಕ್ರಮಗಳು, ಗ್ರಾಮ ಸಭೆಗಳು ಹಾಗೂ ಇತರೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಇಲಾಖೆಯಲ್ಲಿ ಜಾರಿಯಲ್ಲಿರುವ ವಿವಿಧ ಯೋಜನೆಗಳ ಕುರಿತು ಕ್ಷೇತ್ರ ಮಟ್ಟದಲ್ಲಿ ಮಾಹಿತಿ ನೀಡಲಾಗುತ್ತದೆ.<br>• ಇದಲ್ಲದೆ, ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಬಿತ್ತನೆ ಬೀಜಗಳು ಮತ್ತು ಇತರೆ ಕೃಷಿ ಪರಿಕರಗಳ ತಾಂತ್ರಿಕತೆಗಳ ಕುರಿತು ಕ್ಷೇತ್ರ ಮಟ್ಟದಲ್ಲಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತದೆ. ರೈತರಿಗೆ ಸಸ್ಯ ಸಂರಕ್ಷಣಾ ಯೋಜನೆಗಳು, ಬೀಜೋಪಚಾರ ಆಂದೋಲನ, ಸುರಕ್ಷಿತ ಕೀಟನಾಶಕಗಳ ಬಳಕೆ, ಮಣ್ಣು ಪರೀಕ್ಷೆ ಕುರಿತು ಅರಿವು ಮೂಡಿಸುವುದು ಹಾಗೂ ಕೀಟ ಮತ್ತು ರೋಗಗಳ ನಿರ್ವಹಣೆಗೆ ಅಗತ್ಯ ತಾಂತ್ರಿಕ ಸಲಹೆಗಳನ್ನು ನೀಡುವ ಕಾರ್ಯಗಳನ್ನು ರೈತ |

| | | |
|---|---|---|
| | | ಸಂಪರ್ಕ ಕೇಂದ್ರಗಳ ಅಧಿಕಾರಿಗಳು ಕ್ಷೇತ್ರ ಮಟ್ಟದಲ್ಲಿ ಕೈಗೊಳ್ಳುತ್ತಾರೆ.<br>• ಇಲಾಖೆಯ ಪ್ರಮುಖ ಯೋಜನೆಗಳಾದ ಕೃಷಿ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ, ಕೃಷಿ ಭಾಗ್ಯ ಕೃಷಿ ಸಂಸ್ಕರಣೆ ಫಲಾನುಭವಿಗಳ ಕ್ಷೇತ್ರಗಳನ್ನು K-KISAN ಮೊಬೈಲ್ ಆಪ್ ಮೂಲಕ post inspection ಕೈಗೊಂಡು ಘಟಕಗಳು ಸರಿಯಾಗಿ ವಿತರಣೆಯಾಗಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲು ಅಗತ್ಯತೆಗನುಗುಣವಾಗಿ ಗ್ರಾಮ ಭೇಟಿ ಕೈಗೊಳ್ಳುತ್ತಿದ್ದಾರೆ.<br>• ಪ್ರತಿ ಹಂಗಾಮಿನಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಕೃಷಿ ಅಧಿಕಾರಿಗಳು ಹಾಗೂ ಸಹಾಯಕ ಕೃಷಿ ಅಧಿಕಾರಿಗಳು ನಿಯಮಿತವಾಗಿ ಕ್ಷೇತ್ರ ಭೇಟಿ ನೀಡುತ್ತಿದ್ದಾರೆ.<br>• ವಿವಿಧ ಯೋಜನೆಗಳಡಿ (NFSNM, ATMA, NMEO, etc)ಬೆಳೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ರೈತರ ಆಯ್ಕೆ, ಅನುಷ್ಠಾನ, ಉಸ್ತುವಾರಿಗಾಗಿ ಕೃಷಿ ಅಧಿಕಾರಿಗಳು ನಿಯಮಿತವಾಗಿ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದಾರೆ.<br>• 2025-26 ನೇ ಸಾಲಿನ ಫೆಬ್ರುವರಿ ಅಂತ್ಯಕ್ಕೆ ಕೃಷಿ ಸಂಜೀವಿನಿ ಯೋಜನೆಯ ತಾಂತ್ರಿಕ ಸಿಬ್ಬಂದಿಗಳು ಕ್ಷೇತ್ರ ಮಟ್ಟದಲ್ಲಿ ಬೆಳೆಗಳಲ್ಲಿ ಕಂಡುಬರುವ ಕೀಟ/ರೋಗ ಬಾಧೆ ಹಾಗೂ ಪೋಷಕಾಂಶಗಳ ಕೊರತೆಯನ್ನು ಇ-ಸ್ಯಾಪ್ ಮೂಲಕ ನಿಖರವಾಗಿ ಗುರುತಿಸಿ, ಪೀಡೆ ಬಾಧೆಯ ತೀವ್ರತೆಗನುಗುಣವಾಗಿ **11,09,874 ಸಂಖ್ಯೆಯ ನಿರ್ವಹಣಾ ಕ್ರಮಗಳ ಮಾಹಿತಿಯನ್ನು 1,39,677 ರೈತರಿಗೆ ಸಕಾಲದಲ್ಲಿ ಒದಗಿಸಲಾಗಿದೆ**. ಇದರ ಮೂಲಕ ಬೆಳೆಗಳ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. |

**AGRI 111 AGS 2026**

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ-1

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1178

### ಜಿಲ್ಲಾವಾರು, ವೃಂದವಾರು ಹುದ್ದೆಗಳ ವಿವರ

| ಕ್ರ.ಸಂ | ಜಿಲ್ಲೆ | ಕೃಷಿ ಅಧಿಕಾರಿ | | | ಸಹಾಯಕ ಕೃಷಿ ಅಧಿಕಾರಿ | | | ಕೃಷಿ ಸಹಾಯಕ | | |
|---|---|---|---|---|---|---|---|---|---|---|
| | | ಮಂ | ಭ | ಖಾ | ಮಂ | ಭ | ಖಾ | ಮಂ | ಭ | ಖಾ |
| 1 | ಬೆಂಗಳೂರು ನಗರ | 27 | 14 | 13 | 37 | 2 | 35 | 0 | 0 | 0 |
| 2 | ಬೆಂಗಳೂರು ಗ್ರಾಮಾಂತರ | 30 | 19 | 11 | 19 | 0 | 19 | 0 | 0 | 0 |
| 3 | ಬಾಗಲಕೋಟೆ ಜಿಲ್ಲೆ | 48 | 39 | 9 | 62 | 1 | 61 | 0 | 0 | 0 |
| 4 | ಬೆಳಗಾವಿ ಜಿಲ್ಲೆ | 99 | 72 | 27 | 213 | 7 | 206 | 0 | 0 | 0 |
| 5 | ಬಳ್ಳಾರಿ ಜಿಲ್ಲೆ | 39 | 22 | 17 | 29 | 6 | 23 | 1 | 1 | 0 |
| 6 | ವಿಜಯನಗರ ಜಿಲ್ಲೆ | 39 | 32 | 7 | 54 | 0 | 54 | 0 | 0 | 0 |
| 7 | ಬೀದರ್ ಜಿಲ್ಲೆ | 57 | 34 | 23 | 71 | 4 | 67 | 0 | 0 | 0 |
| 8 | ಬಿಜಾಪುರ ಜಿಲ್ಲೆ | 62 | 48 | 14 | 105 | 1 | 104 | 0 | 0 | 0 |
| 9 | ಚಾಮರಾಜನಗರ ಜಿಲ್ಲೆ | 35 | 10 | 25 | 36 | 2 | 34 | 0 | 0 | 0 |
| 10 | ಚಿಕ್ಕಬಳ್ಳಾಪುರ ಜಿಲ್ಲೆ | 58 | 18 | 40 | 56 | 0 | 56 | 0 | 0 | 0 |
| 11 | ಚಿಕ್ಕಮಗಳೂರು ಜಿಲ್ಲೆ | 65 | 24 | 41 | 66 | 0 | 66 | 1 | 1 | 0 |
| 12 | ಚಿತ್ರದುರ್ಗ ಜಿಲ್ಲೆ | 55 | 35 | 20 | 62 | 3 | 59 | 0 | 0 | 0 |
| 13 | ದಕ್ಷಿಣ ಕನ್ನಡ ಜಿಲ್ಲೆ | 43 | 4 | 39 | 47 | 0 | 47 | 0 | 0 | 0 |
| 14 | ದಾವಣಗೆರೆ | 64 | 41 | 23 | 81 | 0 | 81 | 0 | 0 | 0 |
| 15 | ಧಾರವಾಡ ಜಿಲ್ಲೆ | 62 | 46 | 16 | 65 | 4 | 61 | 0 | 0 | 0 |
| 16 | ಗದಗ ಜಿಲ್ಲೆ | 36 | 27 | 9 | 46 | 5 | 41 | 0 | 0 | 0 |
| 17 | ಗುಲ್ಬರ್ಗಾ(ಕಲಬುರಗಿ) ಜಿಲ್ಲೆ | 98 | 56 | 42 | 95 | 9 | 86 | 0 | 0 | 0 |
| 18 | ಹಾಸನ ಜಿಲ್ಲೆ | 71 | 34 | 37 | 85 | 0 | 85 | 0 | 0 | 0 |
| 19 | ಹಾವೇರಿ ಜಿಲ್ಲೆ | 51 | 31 | 20 | 77 | 0 | 77 | 0 | 0 | 0 |
| 20 | ಕೊಡಗು ಜಿಲ್ಲೆ | 31 | 7 | 24 | 20 | 0 | 20 | 0 | 0 | 0 |
| 21 | ಕೋಲಾರ ಜಿಲ್ಲೆ | 50 | 26 | 24 | 53 | 1 | 52 | 1 | 1 | 0 |
| 22 | ಕೊಪ್ಪಳ ಜಿಲ್ಲೆ | 63 | 49 | 14 | 60 | 6 | 54 | 0 | 0 | 0 |
| 23 | ಮಂಡ್ಯ ಜಿಲ್ಲೆ | 74 | 43 | 31 | 87 | 0 | 87 | 0 | 0 | 0 |
| 24 | ಮೈಸೂರು ಜಿಲ್ಲೆ | 69 | 35 | 34 | 82 | 2 | 80 | 0 | 0 | 0 |
| 25 | ರಾಮನಗರ ಜಿಲ್ಲೆ | 31 | 13 | 18 | 49 | 0 | 49 | 0 | 0 | 0 |
| 26 | ರಾಯಚೂರು ಜಿಲ್ಲೆ | 64 | 52 | 12 | 82 | 7 | 75 | 0 | 0 | 0 |
| 27 | ಶಿವಮೊಗ್ಗ ಜಿಲ್ಲೆ | 77 | 47 | 30 | 90 | 0 | 90 | 0 | 0 | 0 |
| 28 | ತುಮಕೂರು ಜಿಲ್ಲೆ | 89 | 43 | 46 | 110 | 2 | 108 | 0 | 0 | 0 |
| 29 | ಉತ್ತರ ಕನ್ನಡ ಜಿಲ್ಲೆ | 74 | 20 | 54 | 69 | 0 | 69 | 0 | 0 | 0 |
| 30 | ಉಡುಪಿ ಜಿಲ್ಲೆ | 22 | 9 | 13 | 40 | 1 | 39 | 0 | 0 | 0 |
| 31 | ಯಾದಗಿರಿ ಜಿಲ್ಲೆ | 38 | 29 | 9 | 51 | 2 | 49 | 0 | 0 | 0 |
| 32 | ಜಾಗೃತದಳ ಸಚಿವಾಲಯ ಬೆಂಗಳೂರು | 2 | 0 | 2 | 0 | 0 | 0 | 0 | 0 | 0 |
| 33 | ಕೇಂದ್ರ ಕಛೇರಿ | 72 | 63 | 9 | 0 | 0 | 0 | 0 | 0 | 0 |
| 34 | ಜ.ಅ.ಇ ಬೆಂಗಳೂರು | 6 | 6 | 0 | 0 | 0 | 0 | 0 | 0 | 0 |
| ಒಟ್ಟು | | 1801 | 1048 | 753 | 2099 | 65 | 2034 | 3 | 3 | 0 |